ವಿವರಿಸುವುದರಲ್ಲಿದೆ. ಈ ಲೋಕ ಎಂದರೆ ಏನು ಅನ್ನುವುದನ್ನು ಡಿಫೈನ್ ಮಾಡುವುದರಿಂದಲೇ ಎಲ್ಲವೂ ಆರಂಭವಾಗೋದು. ನೇಚರ್ ಅನ್ನೋದೇ ಒಂದು ಸಹಜವಾದ ಫಿಲಾಸಫಿ. ನಾವು ನಮ್ಮ ಕೃತಕ ಬುದ್ಧಿಮತ್ತೆಯಿಂದ ಇನ್ನೊಂದಷ್ಟು ಫಿಲಾಸಫಿಗಳನ್ನು ಹುಟ್ಟುಹಾಕಿಕೊಂಡಿದ್ದೇವೆ. ಆದರೆ ನಿಜವಾಗಿಯೂ ನೇಚರ್‌ಗೆ ಹತ್ತಿರವಾದ ಧರ್ಮ, ತತ್ವ ಎನ್ನುವುದೇನಾದರೂ ಜಗತ್ತಿನಲ್ಲಿ ಇದ್ದರೆ ಅದು ಆಯಾ ಭಾಗದ ಜನಪದ ಸಂಸ್ಕೃತಿಗಳು, ಝೆನ್ ಮತ್ತು ತಾವೋಯಿಸಂನಲ್ಲಿ ಮಾತ್ರವೇ ಇವೆ. ಫೋಕ್ ಟ್ರೆಡಿಷನ್‌ನಲ್ಲಿ ವೈರುಧ್ಯಗಳಿವೆ ಎನ್ನುವುದು ನಿಜವಾದರೂ ಅವು ಸಮಾಜದಲ್ಲಿರುವ ವೈರುಧ್ಯಗಳೇ ಆಗಿವೆ ಮತ್ತು ಅವು ಕಾಲದಿಂದ ಕಾಲಕ್ಕೆ ಪ್ರಕ್ಷಿಪ್ತಗಳಿಗೊಳಪಟ್ಟು ಬದಲಾಗುತ್ತಲೂ ಇರುತ್ತವೆ.

◆ **ನೀವು ಹಾಗೂ ನಿಮ್ಮಂಥವರ ಶ್ರಮ, ಬದ್ಧತೆಯಿಂದ ಹುಟ್ಟಿಕೊಂಡ ಚಳವಳಿಗಳು ಕೊನೆಗೆ ತಮ್ಮ ಆಶಯಗಳನ್ನು ಈಡೇರಿಸಿಕೊಂಡವು, ಗುರಿ ಮುಟ್ಟಿದವು ಅನ್ನಿಸುತ್ತಾ?**

ಯಾವುದೇ ಒಂದು ಚಳವಳಿ ಹುಟ್ಟೋದಕ್ಕೆ ಅದರದ್ದೇ ಆದ ಐತಿಹಾಸಿಕ ಒತ್ತಡ ಹಾಗೂ ಅನಿವಾರ್ಯತೆ ಇರುತ್ತೆ. ಅದರ ಗುರಿ ಈಡೇರಿದ ನಂತರ ಅವು ಸಹಜವಾಗಿಯೇ ನಿರಸನಗೊಳ್ಳುತ್ತವೆ. ಆಗ ಬೂಸಾ ಪ್ರಕರಣ, ಎಮರ್ಜೆನ್ಸಿ ಇವೆಲ್ಲ ಸೇರಿಕೊಂಡು ದಲಿತ ಚಳವಳಿ ರೂಪುಗೊಂಡಿತು. ಅದರ ತಕ್ಷಣದ ಗುರಿ ಭೂಹೀನ ದಲಿತರಿಗೆ ಭೂಮಿ ಕೊಡಿಸುವುದು, ಜೀತ ಪದ್ಧತಿಯ ವಿರುದ್ಧ ಹೋರಾಡುವುದು, ಶಿಕ್ಷಣ ಮತ್ತು ಉದ್ಯೋಗ, ದಲಿತರ ಮೇಲಿನ ದೌರ್ಜನ್ಯ, ಅತ್ಯಾಚಾರಗಳನ್ನು ತಡೆಯಬೇಕು ಎಂಬುದೇ ಆಗಿತ್ತು. ದಸಂಸಗೆ ಆರಂಭದಲ್ಲಿ ತಮ್ಮ ಆಶಯಗಳ ಈಡೇರಿಕೆ ಮುಖ್ಯವಾಗಿತ್ತೇ ವಿನಃ ಹೋರಾಟವನ್ನು ಯಾವ ನಿರ್ದಿಷ್ಟ ಸೈದ್ಧಾಂತಿಕತೆಯ ಮೂಲಕ ಕೊಂಡೊಯ್ಯಬೇಕು ಎಂಬುದು ಆದ್ಯತೆಯಾಗಿರಲಿಲ್ಲ. ಸಂಘಟನೆಯು ತನ್ನ ಗುರಿಗಳಲ್ಲಿ ಬಹಳಷ್ಟನ್ನು ಈಡೇರಿಸಿಕೊಂಡಿತು. ಇದಾದ ನಂತರ ಯಾವ ಹಂತದಲ್ಲಿ ಅದು ಸಿದ್ಧಾಂತದ ಕಡೆ ಗಮನ ಕೊಡಬೇಕು ಅಂತ ನಾವು ನಿರೀಕ್ಷಿಸಿದ್ದೆವೋ ಆ ಹಂತದಲ್ಲಿ ಅದು ರಾಜಕೀಕರಣಗೊಂಡಿತಾದರೂ ಹಲವು ರೀತಿಯ ಪ್ರಲೋಭನೆ, ಒಳದೌರ್ಬಲ್ಯಗಳಿಂದ ಚಳವಳಿ ನಿಶ್ಶಕ್ತಗೊಂಡಿತು.

◆ **ಈಗ ಯುವಕ ಯುವತಿಯರಲ್ಲಿ ಸಮಾಜ, ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಅಷ್ಟು ಗಮನ, ಕಾಳಜಿ ಇದೆ ಅನ್ನಿಸೋಲ್ಲ. ಈ ದಿಸೆಯಲ್ಲಿ ನಿಮ್ಮ ತಲೆಮಾರಿಗೂ ಸದ್ಯದ ತಲೆಮಾರಿಗೂ ನೀವು ಗುರುತಿಸುವ ಮುಖ್ಯ ವ್ಯತ್ಯಾಸವೇನು?**

ನಮ್ಮ ಬಾಲ್ಯದಲ್ಲಿ ನಮಗಿದ್ದ ಆಸಕ್ತಿಯ ವಲಯ ಬಹಳ ಮಿತವಾಗಿತ್ತು. 'ಮಿತವಾಗಿರುವುದರಲ್ಲೇ ಅಮಿತ ಆನಂದವಿದೆ' ಎನ್ನುತ್ತದೆ ತಾವೋಯಿಸಂ. ಈಗ ಇಡೀ ಜಗತ್ತು ನಿಮ್ಮ ಅಂಗೈಯಲ್ಲಿನ ನೆಲ್ಲಿಕಾಯಿ ಆಗಿದೆ. ಜಗತ್ತಿನ ಯಾವ ಮೂಲೆಯಲ್ಲಿ ಏನು ನಡೆಯುತ್ತಿದೆ ಅನ್ನೋದನ್ನು ಕುಳಿತಲ್ಲೇ ನೋಡಬಹುದು. ಈಗಿನ ತಲೆಮಾರಿಗೆ ಆಯ್ಕೆ, ಆಮಿಷಗಳು, ಪ್ರಲೋಭನೆಗಳು ವಿಪುಲವಾಗಿವೆ. ನಿಮ್ಮನ್ನು ಯಾವತ್ತೂ ಈ ಸಿಸ್ಟಮ್ ವಿರುದ್ಧ ನಿಲ್ಲದಂತೆ ಮಾಡುವ ಕಾರ್ಪೊರೇಟ್ ವಲಯದ ನಾಜೂಕು ಹುನ್ನಾರ ಗುಪ್ತವಾಗಿ ಜಾರಿಯಲ್ಲಿದೆ. ಕ್ರೋನಿ ಕ್ಯಾಪಿಟಲಿಸಂ ಇವತ್ತು ಒಂದು ಕ್ಷಣವೂ ಸಾಮಾನ್ಯ ವಿವೇಕದಿಂದ ಬದುಕಗೊಡುವುದಿಲ್ಲ. ಈ ಕಾರ್ಪೊರೇಟ್ ಜಗತ್ತು ಉತ್ಪಾದಿಸುತ್ತಿರುವುದರ ಪೈಕಿ ಶೇ. 70 ಭಾಗ ಅನಗತ್ಯ ಅಷ್ಟೇ ಅಲ್ಲ, ಅಪಾಯಕಾರಿ ಕೂಡ.

◆ **ನೀವು ಬಹಳ ಕಾಲದಿಂದ ಒಂದು ಕಾದಂಬರಿ ಬರೆಯಲು ತಯಾರಿ ನಡೆಸುತ್ತಿದ್ದೇನೆ ಎಂದು**